‘ಅದು ನಿಜ’.

‘ಪೀಟರ್...’

‘ಆತ್ಮಹತ್ಯೆ ಮಾಡಿಕೊಂಡ?’

‘ಆತ್ಮಹತ್ಯೆ ಮಾಡಿಕೊಂಡ? ಏಕೆ?’

‘ಗೊತ್ತಿಲ್ಲ, ಅವನು ಯಾವುದೇ ನೋಟ್ ಬರೆದಿಲ್ಲ.’

ನಾನು ಈ ಅನಿರೀಕ್ಷಿತ ಘಟನೆಯಿಂದ ದಂಗಾದೆ. ನಲ್ವತ್ತಾರರ ಪೀಟರ್ ಆತ್ಮಹತ್ಯೆ ಮಾಡಿಕೊಂಡ! ತುಂಬಾ ಹ್ಯಾಂಡ್‌ಸಮ್ ಆಗಿದ್ದ, ಒಳ್ಳೆಯ ಹುದ್ದೆಯಲ್ಲಿದ್ದ, ಪ್ರತಿಷ್ಠೆಯ ವ್ಯಕ್ತಿತ್ವವುಳ್ಳ ವ್ಯಕ್ತಿ ತನ್ನನ್ನೇ ತಾನು ಕೊಂದುಕೊಂಡ! ಅವನ ಜೀವನದಲ್ಲಿ ಸಾಧಿಸಬೇಕಾದದ್ದು ಇನ್ನೂ ಬಹಳಷ್ಟಿತ್ತು. ಅಷ್ಟೊಂದು ಬಲಶಾಲಿ ಮತ್ತು ಅಭಿಮಾನವುಳ್ಳ ವ್ಯಕ್ತಿ ತುಂಬಾ ದುರ್ಬಲನೆಂದು ಸಾಬೀತಾದ. ತನ್ನ ಮಗಳ ಬಗ್ಗೆಯೂ ಯೋಚಿಸಲಿಲ್ಲ. ನೀನಾ ಕ್ಯಾನ್ಸರ್‌ನೊಂದಿಗೆ ಹೋರಾಡುತ್ತಿದ್ದಾಳೆ, ಅವಳ ಬಗ್ಗೆಯೂ ಯೋಚಿಸಲಿಲ್ಲ! ಜೀವನ ಅದೆಷ್ಟು ಅನಿಶ್ಚಿತ! ಮನುಷ್ಯನ ಜೀವನದಲ್ಲಿ ಏನೇನು ಸಂಭವಿಸುತ್ತದೆ ಎಂಬುದನ್ನು ಅರ್ಥ ಮಾಡಿಕೊಳ್ಳಲು ಸಾಧ್ಯವಿಲ್ಲ. ಯಾರು ಹೊರ ನೋಟಕ್ಕೆ ಸಂತಸದಿಂದಿರುವರೋ ಅಥವಾ ಯಾರು ಕಠೋರತೆಯನ್ನು ತೋರುವರೋ, ಅವರ ನಿಜ ಜೀವನದಲ್ಲಿ ಏನೇನು ಘಟಿಸುತ್ತಿರುವುದೋ, ಈ ಬಗ್ಗೆ ನಾವು ಯೋಚಿಸಲಾರೆವು. ಆದರೆ ಅವನು ಹೆಚ್ಚು ನಿರಾಶೆಯಿಂದ ಬದುಕುತ್ತಿದ್ದ ಎಂಬುದು ಸತ್ಯ. ಆತ್ಮಹತ್ಯೆಯ ಮನೋವಿಜ್ಞಾನ ಮರಣದಲ್ಲಿ ಅಡಗಿದೆ. ಅವರಿಗೆ ಸಾವು ಅಂತಿಮ ಸಮಾಧಾನವಾಗಿ ತೋರುತ್ತದೆ.

ನಾನು ಕೂಡಲೇ ಶಾಲೆಯಿಂದ ರಜಾ ಪಡೆದು ನೀನಾಳ ಬಳಿಗೆ ಹೋದೆ.

ಮೊಟ್ಟ ಮೊದಲು ಅವರ ನೆರೆಮನೆಯ ನೀಲ್ಸನ್, ಪೀಟರ್ ನೇತಾಡುತ್ತಿರುವುದನ್ನು ನೋಡಿದ್ದ. ಅವನು ಬೆಳಿಗ್ಗೆ ಐದು ಗಂಟೆಗೆ ಗ್ಯಾರೇಜಿನಿಂದ ತನ್ನ ಕಾರನ್ನು ಹೊರ ತೆಗೆದು ಹಂಬರ್ಗ್, ಜರ್ಮನಿಗೆ ಹೋಗುವವನಿದ್ದ. ಅವನು ಕೂಡಲೇ ಪೊಲೀಸಿಗೆ ಫೋನ್ ಮಾಡಿ ಸೂಚನೆ ಕೊಟ್ಟ. ಪೊಲೀಸರು ನೀನಾಳ ಮನೆಗೆ ಬಂದರು. ನೀನಾಳ ಪ್ರವೇಶ ದ್ವಾರದಲ್ಲಿದ್ದ ಗಂಟೆಯನ್ನು ಒತ್ತಿದರು. ನೀನಾ ಬಾಗಿಲು ತೆರೆದು ಹೊರ ಬಂದಾಗ ಜನರ ಜಮಾವಣೆ ನೋಡಿ ದಂಗಾದಳು. ಅವಳ ಮನೆಯ ಸಮೀಪ ನೆರೆಹೊರೆಯವರು ಮತ್ತು ಪೊಲೀಸರಿದ್ದರು. ನೀನಾ ಆಶ್ಚರ್ಯದಿಂದ ಎಲ್ಲರನ್ನು ನೋಡಿದಳು. ಪೊಲೀಸರು ನೀನಾಳ ತೋಟದಲ್ಲಿದ್ದ ಒಂದು ಮರದೆಡೆಗೆ ಸಂಜ್ಞೆ ಮಾಡಿದರು. ನೀನಾ ಅದನ್ನು ನೋಡಿ ಜಡವಾದಳು. ತನಗೆ ಅತ್ಯಂತ ಪ್ರಿಯವಾಗಿದ್ದ ಜಪಾನಿನ ಮೂಲನಿವಾಸಿ, ಹಾಡ್‌ವುಡ್‌ನ ಕತ್ಸುರಾ ಮರದ ಒಂದು ಎತ್ತರದ ಕೊಂಬೆಯಲ್ಲಿ ಪೀಟರ್ ನೇತಾಡುತ್ತಿದ್ದ. ದಪ್ಪನೆಯ ಹಗ್ಗದ ಒಂದು ತುದಿಯನ್ನು ಮರದ ಕೊಂಬೆಗೆ ಬಿಗಿದು ಕಟ್ಟಲಾಗಿತ್ತು, ಇನ್ನೊಂದು ತುದಿಯನ್ನು ಪೀಟರ್ ತನ್ನ ಕೊರಳಿಗೆ ಕಟ್ಟಿಕೊಂಡಿದ್ದ. ಆಗ ಕತ್ಸುರಾ ನೀನಾಳಿಗೆ ಒಬ್ಬ ರಾಕ್ಷಸನಂತೆ ಕಂಡಿತು. ಮರಗಳ ಉಪಯೋಗ ಹೀಗೂ ಆಗುವುದೇ!

ನೀನಾ, ಪೀಟರ್ ಮರಕ್ಕೆ ನೇತಾಡುವುದನ್ನು ನೋಡುವ ಕೊನೆಯ ವ್ಯಕ್ತಿಯಾಗಿದ್ದಳು. ಅವಳು ತನ್ನ ಸಂತುಲನೆಯನ್ನು ಕಳೆದುಕೊಂಡಳು. ಇಬ್ಬರು ನೆರೆಮನೆಯವರು ಮುಂದೆ ಬಂದು ಅವಳಿಗೆ ಆಸರೆ ನೀಡಿದರು. ಪೊಲೀಸರು ವಿಭಿನ್ನ ಕೋನಗಳಿಂದ ಪೀಟರನ ಚಿತ್ರವನ್ನು ತೆಗೆದುಕೊಂಡರು. ಅವನ ಕೊರಳಿನಿಂದ ಹಗ್ಗವನ್ನು ತೆಗೆದರು. ಕೊರಳ ಮೇಲೆ ಹಗ್ಗದ ಗುರುತು ಮೂಡಿತ್ತು; ದವಡೆಗೆ ಒತ್ತಡ ಬಿದ್ದಿದ್ದರಿಂದಾಗಿ ನಾಲಿಗೆ ಹೊರಬಂದಿತ್ತು. ಅವನನ್ನು ತಕ್ಷಣ ಅಸ್ಪತ್ರೆಗೆ ಕರೆದೊಯ್ಯಲಾಯಿತು. ಅಲ್ಲಿ ವೈದ್ಯರು ಅವನು ಸತ್ತಿರುವುದಾಗಿ ಘೋಷಿಸಿದರು.

ಪೀಟರ್ ಅನೇಕ ಪ್ರಶ್ನೆಗಳನ್ನು ಬಿಟ್ಟು ಹೊರಟುಹೋದ. ಅವನು ತೋಟದ ಅತ್ಯಂತ ಬಲಿಷ್ಠ ಮರವನ್ನು ಆಯ್ಕೆಮಾಡಿದ್ದ. ಬೂಟುಗಳು ಅವನ ಕಾಲುಗಳಿಗೆ ಬಿಗಿಯಾಗಿ ಕಟ್ಟಲ್ಪಟ್ಟಿದ್ದವು, ಹೀಗಿರುವಾಗ ಅವನು ಎತ್ತರದ ಕೊಂಬೆಯವರೆಗೆ ಹೇಗೆ ಹತ್ತಿದ? ಕೊರಳಿಗೆ ಕಟ್ಟಿಕೊಳ್ಳಲು ಸೆಣಬಿನ ದಪ್ಪ ಹಗ್ಗ ಎಲ್ಲಿಂದ ಬಂತು? ನೀನಾಳ ಮನೆಯಲ್ಲಿ ಅದು ಇರಲಿಲ್ಲ. ಅವನು ಕೊರಳಿಗೆ ಕಟ್ಟಿಕೊಂಡಿದ್ದ ಗಂಟು ವಿಶೇಷವಾಗಿದ್ದು, ಅಂಥ ಗಂಟನ್ನು ಗಲ್ಲಿಗೆ ಹಾಕಲೋಸುಗ ಕಟ್ಟಲಾಗುತ್ತದೆ ಎಂದು ಪೊಲೀಸರು ಹೇಳಿದರು. ಅವನು ಎಲ್ಲಿಂದ ಅಂಥ ಗಂಟು ಹಾಕುವುದನ್ನು ಕಲಿತ? ಅದೊಂದು ಪೂರ್ವಯೋಜಿತ ಕೆಲಸವಾಗಿತ್ತು, ಆವೇಗದಲ್ಲಿ ತೆಗೆದುಕೊಂಡ ತೀರ್ಮಾನವಲ್ಲ ಎಂಬುದು ಸ್ಪಷ್ಟವಾಗಿತ್ತು.

ರಕ್ತಸಂಬಂಧವೇ ಮುಖ್ಯವಾಗುತ್ತದೆ. ಪೀಟರನ ಮಗಳಾದ ಎಮಿಲಿಗೆ ಮೊದಲು ಸೂಚನೆಯನ್ನು ಕಳುಹಿಸಲಾಯಿತು. ಅವಳು ಬಂದ ಕೂಡಲೇ ನೀನಾಳ ಮೇಲೆರಗಿದಳು. ನನ್ನ ತಂದೆಯ ಸಾವಿಗೆ ನೀನೇ ಕಾರಣ ಎಂದಳು. ನಿಮ್ಮ ಪರಸ್ಪರ ವಿವಾದದಿಂದಾಗಿ, ವಿಧಿಯಿಲ್ಲದೆ ನನ್ನ ತಂದೆ ಆತ್ಮಹತ್ಯೆಯನ್ನು ಮಾಡಿಕೊಂಡರು. ನೀನು ಅಪರಾಧಿ, ಕೊಲೆಗಡುಕಿ ಎಂದು ಆರೋಪವನ್ನು ಹೊರಿಸಿದಳು.

ನೀನಾಳಲ್ಲಿ ಜಗಳವಾಡುವ ಶಕ್ತಿ ಸಹ ಇರಲಿಲ್ಲ. ಅವಳು ಮೌನವಾಗಿದ್ದು ಪೀಟರನ ಮಗಳ ನಿಂದನೆಯನ್ನು ಸಹಿಸಿದಳು. ಪೀಟರನ ಅಂತಿಮ ಸಂಸ್ಕಾರವಾದ ನಂತರ ಎಮಿಲಿ ನೀನಾಳನ್ನು ಬೇರೆ ವಿಧದಲ್ಲಿ ಕಾಡಲಾರಂಭಿಸಿದಳು, ‘ನನ್ನ ತಂದೆಯ ಬ್ಯಾಂಕಿನ ದಾಖಲೆಗಳು ಎಲ್ಲಿವೆ? ನನ್ನ ತಂದೆಯ ವಸ್ತುಗಳು ಎಲ್ಲಿವೆ? ನನ್ನ ತಂದೆಯ ಹಣ ಎಲ್ಲಿದೆ?’

‘ನನ್ನ ಹತ್ತಿರ ಪೀಟರ್‌ಗೆ ಸಂಬಂಧಿಸಿದ್ದು ಏನೇನೂ ಇಲ್ಲ.’ ನೀನಾ ದುರ್ಬಲ ಧ್ವನಿಯಲ್ಲಿ ಹೇಳುತ್ತಿದ್ದಳು. ‘ಡೋಂಗ್ ಕಂಪನಿಯ ಡೈರೆಕ್ಟರ್ ತಮ್ಮ ಭಾರತೀಯ ಮೂಲದ ಗರ್ಲ್‌ಫ್ರೆಂಡಿನ ಲಾನ್‌ನಲ್ಲಿದ್ದ ಮರಕ್ಕೆ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡರು’

ಈ ಸುದ್ದಿ ಡೆನ್ಮಾರ್ಕ್‌ನ ಎಲ್ಲಾ ಪತ್ರಿಕೆಗಳಲ್ಲಿ ಪ್ರಕಟವಾಗಿತ್ತು. ನೀನಾ ಯಾರಿಗೂ ಮುಖ ತೋರಿಸಲು ಯೋಗ್ಯಳಾಗಿ ಉಳಿದಿರಲಿಲ್ಲ.

ಎದುರಿಗಿದ್ದ ಮರದ ಮೋಟಿಗೆ ತೂಗಾಡುತ್ತಿದ್ದ ಒಂದು ಬಲವಾದ ಬಳ್ಳಿಯನ್ನು ನೋಡಿ, ಹಾವು ನೇತಾಡುತ್ತಿದೆ ಎಂದು ಅನ್ನಿಸಿತು. ನಾನು ಕಂಪಿಸಿದೆ. ಅಂಧಕಾರದಲ್ಲಿ ದೃಷ್ಟಿದೋಷವಿದೆ. ಬಳ್ಳಿ ವಿಷಸರ್ಪದಂತೆ ಕಾಣ ಬರುತ್ತಿತ್ತು. ನಾನು ಪೀಟರ್‌ನ ನೇತಾಡುತ್ತಿದ್ದ ಶವದೊಂದಿಗೆ ಅದರ ಹೋಲಿಕೆಯನ್ನು ಮಾಡಿದೆ. ನಾನೇ ನನ್ನ ಮೆದುಳಿನಲ್ಲಿ ಈ ವಿಚಾರವನ್ನು ಹೆಣೆದು ಭಯಭೀತನಾದೆ. ನಾನು ಪೀಟರ್‌ನ ಶವ ಮರಕ್ಕೆ ನೇತಾಡುವುದನ್ನು ನೋಡಿರಲಿಲ್ಲ, ಕೇಳಿದ್ದೆನಷ್ಟೆ. ಆದರೂ ಅದು ನನ್ನ ಮನಸ್ಸಿನಲ್ಲಿ ದಟ್ಟವಾಗಿ ಆವರಿಸಿತ್ತು.

## ಕಳೆದ ಸಂಚಿಕೆಯಲ್ಲಿ



ಗ್ಲಾಸ್ಗೋದಲ್ಲಿ ಅಮ್ಮನೊಂದಿಗಿದ್ದ ನಾಲ್ಕು ದಿನಗಳು ಪಾಲ್‌ನಲ್ಲಿ ಮತ್ತೆ ಜೀವನೋತ್ಸಾಹ ತುಂಬಿದವು. ಅದೇ ಸಮಯದಲ್ಲಿ ಪಾಲ್ ತನ್ನ ನೃತ್ಯ ಗುರು ರಾಬರ್ಟ್‌ನನ್ನು ಭೇಟಿಯಾದ. ರಾಬರ್ಟ್ ಆರ್ಥಿಕವಾಗಿ ಮುಂದಕ್ಕೆ ಬರದಿದ್ದರೂ, ಕೌಟುಂಬಿಕವಾಗಿ ನೆಮ್ಮದಿಯ ಜೀವನ ನಡೆಸುತ್ತಿದ್ದ. ಗುರುಶಿಷ್ಯರ ಭೇಟಿ ಇಬ್ಬರಿಗೂ ಸಂತಸ ತಂದಿತು. ಪಾಲ್ ಹೊಸ ಉತ್ಸಾಹದೊಂದಿಗೆ ಡೆನ್ಮಾರ್ಕ್‌ಗೆ ಪಯಣ ಬೆಳೆಸಿದ. ಮಗಳು ಕೋರ್ಟ್‌ನಲ್ಲಿ ಸರ್ ನೇಮ್ ಬದಲಿಸಿಕೊಂಡಿರುವ ಸುದ್ದಿಯೂ ತಿಳಿಯಿತು. ಡೆನ್ಮಾರ್ಕ್‌ಗೆ ಬಂದ ನಂತರ ಒಂದು ದಿನ ಪಾಲ್‌ಗೆ ನೀನಾಳಿಂದ ಫೋನ್ ಕರೆ ಬಂತು. ಕ್ಯಾನ್ಸರ್‌ನಿಂದ ಬಾಧಿತಳಾಗಿದ್ದ ಅವಳು ಸಾವಿನ ಆತಂಕ ಎದುರಿಸುತ್ತಿದ್ದಳು. ನೀನಾಳನ್ನು ಭೇಟಿಯಾದ ಪಾಲ್, ತನ್ನ ಮಾಜಿ ಸಂಗಾತಿಗೆ ಧೈರ್ಯ ತುಂಬಿದ. ಇಬ್ಬರೂ ಮತ್ತೆ ಮತ್ತೆ ಭೇಟಿಯಾಗತೊಡಗಿದರು, ಫೋನ್–ಫೇಸ್‌ಬುಕ್ ಮೂಲಕ ಸಂಪರ್ಕಿಸತೊಡಗಿದರು. ಈ ಸಂವಹನ ನೀನಾಳ ಸದ್ಯದ ಗಂಡನಿಗೆ ಇರುಸುಮುರುಸು ಉಂಟುಮಾಡಿತು. ಹಳೆಯ ನೆನಪುಗಳೊಂದಿಗೆ ಪಾಲ್ ಪಾದಯಾತ್ರೆ ಮುಂದುವರೆಸುತ್ತಿದ್ದಾಗ, ಇರುಳಿನಲ್ಲಿ ಮಹಿಳೆಯೊಬ್ಬಳು ಜೊತೆಯಾದಳು. ಕೆಲಸ ಕಳೆದುಕೊಂಡಿದ್ದ ಆ ಮಹಿಳೆ, ತನ್ನ ಮಗನ ಹುಟ್ಟುಹಬ್ಬ ಆಚರಿಸುವುದು ಹೇಗೆನ್ನುವ ಚಿಂತೆಯಲ್ಲಿದ್ದಳು.